‘ಇಲ್ಲ, ನಾನು ತಿಳಿದುಕೊಳ್ಳಬೇಕು. ಇ...ಷ್ಟು ದಿನ ಒಂದು ಅನುಮಾನ ಕೊರೆಯುತ್ತಲೇ ಇತ್ತು... ಅಹಲ್ಯೇ... ನೀನು... ಈ ದಿನ ಸತ್ಯ ಹೇಳಬೇಕು...’

‘ನಾನು ಯಾವತ್ತೂ ಸುಳ್ಳಾಡಿಲ್ಲ.’

‘ಹಾಗಾದರೆ ಹೇ... ಹೇಳು. ಅಂದು... ಅವನು ಅವನೇ ಎಂದು ತಿಳಿದಿತ್ತೇ ನಿನಗೆ? ಅಥವಾ ಅವನು ನಾನೇ ಎಂದು ಗೊಂ...ದಲ ಗೊಂಡಿದ್ದೆಯಾ?’

ಅಹಲ್ಯೆ ಸಂದಿಗ್ಧಕ್ಕೆ ಬಿದ್ದಳು.

ಇಂದ್ರ ಪತಿಯ ವೇಷಧರಿಸಿ, ತನ್ನನ್ನು ಮೋಸಗೊಳಿಸಿ ಸಮೀಪಿಸಿದ್ದೇನೋ ನಿಜ. ಆದರೆ... ತನಗೆ ಗೊತ್ತಾಗಿತ್ತಲ್ಲ ಅವನು ತನ್ನ ಪತಿಯಲ್ಲ ಎಂದು? ಅದನ್ನು ಹೇಗೆ ಹೇಳಲಿ?

‘ದೇವರೇ, ತನ್ನ ಈ ಸ್ಥಿತಿ ಬೇರಾವ ಹೆಣ್ಣಿಗೂ ಬಾರದೇ ಇರಲಿ.’

‘ಅವನು ನೀವೇ ಎಂದುಕೊಂಡಿದ್ದೆ’ ಎಂದು ಸುಳ್ಳು ಹೇಳುವುದರಿಂದ ಗೌತಮರಿಗೆಷ್ಟು ಸಂತೋಷವಾಗುತ್ತದೆ ಎಂದೂ, ಆ ಸುಳ್ಳನ್ನೇ ಆತ ತನ್ನಿಂದ ನಿರೀಕ್ಷಿಸುತ್ತಿದ್ದಾನೆಂದೂ ಅವಳಿಗೆ ಸ್ಪಷ್ಟವಾಯಿತು. ಆದರೆ... ಕೊನೆಗಾಲದಲ್ಲಿ... ಇನ್ನೂ ಸ್ವಲ್ಪ ದಿನಗಳಲ್ಲೇ ತಾನೂ ಪ್ರಾಣಬಿಡುವ ಸಮಯದಲ್ಲಿ ಸುಳ್ಳಾಡುವುದೇ? ಪತಿಯ ಮುಖದ ಮೇಲಿನ ಸಾವಿನ ಕಳೆಯನ್ನು ಅವಳು ಗುರುತಿಸಿದಳು. ಈ ಸಮಯದಲ್ಲಿ ತಾನು ಸತ್ಯವನ್ನೇ ಹೇಳಬೇಕು. ಅದೆಷ್ಟೇ ಕಠೋರವಾಗಿದ್ದರೂ... ಅಹಲ್ಯೆ ತನ್ನೊಳಗನ್ನು ಬಿಚ್ಚಿಕೊಳ್ಳುವವಳಂತೆ ಮಾತಾಡತೊಡಗಿದಳು...

‘ಇಲ್ಲ. ನನ್ನ ಸ್ವಾಮೀ, ಅವನು ಇಂದ್ರನೆಂದು ಗೊತ್ತಿದ್ದೇ ನಾನು ಅವನನ್ನು ಕೂಡಿದೆ. ಆದರೆ, ನಾನೆಂದೂ ಅವನನ್ನು ಪ್ರೀತಿಸಲಿಲ್ಲ! ಅದು ಕ್ಷಣಿಕ ಆವೇಶ. ಪ್ರಕೃತಿ ಸಹಜ ಬಯಕೆ. ಅಷ್ಟೇ. ನಾನು ಸದಾ ಪ್ರೀತಿಸಿದ್ದು, ಬಯಸಿದ್ದು ನಿಮ್ಮನ್ನೇ! ನಿಮಗದು ಅರ್ಥವಾಗಲಿಲ್ಲ.

ಸದಾ ತಪಸ್ಸು ಅಧ್ಯಯನದಲ್ಲೇ ಮುಳುಗಿ ನನ್ನನ್ನು ಉಪೇಕ್ಷಿಸಿದರಿ ನಾನೇನು ಮಾಡಲಿ? ನನ್ನ ದೇಹ ನನ್ನ ಮಾತು ಕೇಳಲಿಲ್ಲ!

ಅದಕ್ಕಾಗಿ ನಾನೆಷ್ಟು ಪಶ್ಚಾತ್ತಾಪ ಪಟ್ಟಿರುವೆ ಗೊತ್ತೇ? ಇಲ್ಲ. ನಿಮಗೆ ಗೊತ್ತಾಗುವುದಿಲ್ಲ. ನಿಮಗೆ ಎಂದೂ... ಏನೂ ಗೊತ್ತಾಗಲೇ ಇಲ್ಲ.’

ಅಹಲ್ಯೆ ಮಾತಾಡುತ್ತಲೇ ಇದ್ದಳು. ಗೌತಮ ‘ನಿಲ್ಲಿಸು’ ಎಂಬಂತೆ ಕೈ ಎತ್ತಿದರು.

ಕ್ಷೀಣಧ್ವನಿಯಲ್ಲಿ ಉಸಿರಿದರು, ‘ಅಹಲ್ಯೇ... ನೀ...ನು ಸುಳ್ಳು ಹೇ...ಳಿದ್ದರೇ ಚೆನ್ನಾಗಿತ್ತು!’ ಮಾತು ಪೂರ್ತಿಯಾಗಲಿಲ್ಲ, ಗೌತಮರ ಕಣ್ಣುಗಳು ಮುಚ್ಚಿಕೊಂಡುಬಿಟ್ಟವು... ಶಾಶ್ವತವಾಗಿ! ಇನ್ನೆಂದೂ ತೆರೆಯಲಾರದಂತೆ!

ವೈದ್ಯ ವೃಷಭದೇವ ಗಡಬಡಿಸಿ ಒಳಬಂದ. ನಾಡಿ, ಹೃದಯಮಿಡಿತ ಪರೀಕ್ಷಿಸಿ ಬಂದಷ್ಟೇ ವೇಗವಾಗಿ ಹೊರಕ್ಕೋಡಿದ!

ಒಂದೆರಡು ಕ್ಷಣಗಳಲ್ಲೇ ಶಿಷ್ಯರ ಮಹಾಪೂರ ಗೌತಮರ ಕುಟೀರದೊಳಕ್ಕೆ ನುಗ್ಗಿ ಬಂತು!

ರೋದನದ ಧ್ವನಿ ನಾಲ್ಕೂ ದಿಕ್ಕಿಗೆ ವ್ಯಾಪಿಸಿದಂತೆ, ಅಹಲ್ಯೆ ನಿಧಾನವಾಗಿ ಎದ್ದು ಹೊರಬಂದಳು.

ಎದುರಿಗೆ ಕಂಡ ಶ್ವೇತಾಂಬರಿ ತೆಕ್ಕೆಬಿದ್ದು ಅತ್ತಳು.

‘ಅಮ್ಮಾ, ಮುನಿಗಳು ಈ ಲೋಕ ಬಿಟ್ಟು ಹೊರಟುಹೋದರು.’ ಅಹಲ್ಯೆ ಶಾಂತವಾಗಿದ್ದಳು.

‘ಇಂದು ಅವರು ಹೋದರು. ನಾಳೆ ನಾನು! ಎಲ್ಲರೂ ಈ ಲೋಕ ಬಿಟ್ಟು ಹೋಗುವವರೇ ಮಗಳೇ, ನನಗೇನು ದುಃಖವಿಲ್ಲ. ನಾನು ಸತ್ಯವನ್ನೇ ನುಡಿದೆ.’

ಶ್ವೇತಾಂಬರಿಗೆ ಏನೂ ಅರ್ಥವಾಗಲಿಲ್ಲ. ಅಹಲ್ಯೆ ವಿವರಿಸುವ ಗೋಜಿಗೆ ಹೋಗಲಿಲ್ಲ.

ಆಗತಾನೇ ಮೂಡುತ್ತಿದ್ದ ಸೂರ್ಯನಿಗೆ ಎದುರಾಗಿ, ನಡೆದುಬಿಟ್ಟಳು.